# ಅಪ್ಪನ ಆಸೆ ಬಿಟ್ಟು ತಾತನ ಕನಸು ಹಿಡಿದೆ

**ವರ್ಷಿಕಾ ನಾಯಕ್**
ಸ್ಟಾರ್ ಸುವರ್ಣದ 'ಅರಮನೆ ಗಿಳಿ'ಯ ಮೀರಾ



**◆ ಮೀರಾ ಎಷ್ಟು ಮಹತ್ವದವಳು ಎಂದು ಅನ್ನಿಸುತ್ತದೆ?**

'ಕ್ಷಮಯಾ ಧರಿತ್ರಿ' ಎನ್ನುತ್ತಾರಲ್ಲ ಅಂತಹ ಗುಣವಂತೆ ಮೀರಾ. ಆಕೆಗೆ ಎಷ್ಟೇ ಕಷ್ಟಗಳು ಸಾಲು ಸಾಲಾಗಿ ಎದುರಾದರೂ ಆಕೆ ಅವುಗಳನ್ನು ಬಂಡೆಯಂತೆ ಎದುರಿಸಲು ಸಿದ್ಧಳಿದ್ದಾಳೆ. ಎಂತಹ ತ್ಯಾಗಕ್ಕಾದರೂ ಆಕೆ ತಯಾರಿದ್ದಾಳೆ. ಮೀನಾಕ್ಷಿಯ ಬಗ್ಗೆ ಅಪಾರ ಗೌರವ. ಅವಳಿಗಾಗಿ ಏನಾದರೂ ಮಾಡಲು ಸಿದ್ಧ. ಇಂತಹ ಅಭೂತಪೂರ್ವ ಪಾತ್ರಕ್ಕೆ ಶೇ.100ರಷ್ಟು ನ್ಯಾಯ ಒದಗಿಸಬೇಕು ಎನ್ನುವುದು ನನ್ನ ಅಪೇಕ್ಷೆ. ನಾನು ಅಂದುಕೊಂಡಂತೆಯೇ ಕೆಲಸ ಮಾಡುತ್ತಿದ್ದೇನೆ. ಎಷ್ಟರಮಟ್ಟಿಗೆ ತಲ್ಲೀನ ಆಗುತ್ತೇನೆ ಎನ್ನುವುದು ನಾನರಿಯೆ. ನಿರ್ದೇಶಕರು ಹೇಳುವಂತೆ ನನ್ನ ಪಾತ್ರಕ್ಕೆ ನಾನು ನ್ಯಾಯ ಸಲ್ಲಿಸಿದ್ದೇನೆ. ನೋಡಿದವರೆಲ್ಲ ಮೆಚ್ಚುಗೆಯನ್ನು ಸೂಚಿಸಿದ್ದಾರೆ.

**◆ ಬಾಲ್ಯದಲ್ಲಿ ನೀವು ಏನಾಗುತ್ತೇನೆಂದು ಅಂದುಕೊಂಡಿದ್ರಿ?**

ನಾನು ಅಪ್ಪನ ಮಗಳು. ಅಪ್ಪ ಬಾಲ್ಯದಲ್ಲಿ ಎರಡು ಆಯ್ಕೆಗಳನ್ನು ನನ್ನ ಮನಸ್ಸಿನಲ್ಲಿ ತುಂಬಿದ್ದರು. ಮೆಡಿಕಲ್ ಮಾಡಿ ವೈದ್ಯೆ ಆಗಬೇಕು ಇಲ್ಲವೇ ಎಂಜಿನಿಯರಿಂಗ್ ಮಾಡಬೇಕು ಎನ್ನುತ್ತಿದ್ದರು. ಅವರ ಮಾತುಗಳನ್ನು ನನ್ನವನ್ನಾಗಿ ಮಾಡಿಕೊಂಡಿದ್ದೆ. ಯಾರಾದರೂ ಮುಂದೆ ಏನಾಗುತ್ತೀಯಾ? ಎಂದು ಕೇಳಿದರೆ ನಾನೂ ವೈದ್ಯೆ ಇಲ್ಲ ಎಂಜಿನಿಯರ್ ಎಂದು ಹೇಳ್ತಾ ಇದ್ದೆ. ವಾಸ್ತವದಲ್ಲಿ ಅವೆರಡನ್ನೂ ಮಾಡದೆ ಫ್ಯಾಷನ್ ಡಿಸೈನಿಂಗ್ ಮಾಡಿದೆ. ವೃತ್ತಿಯಾಗಿಯೂ ಕೆಲದಿನ ಅದನ್ನೇ ಮಾಡಿದೆ. ಮಾಡಬೇಕು ಎನ್ನುವ ಹಟದಿಂದೇನೂ ಮಾಡಿರಲಿಲ್ಲ. ಸಹಜವಾಗಿ ಅದರತ್ತ ವಾಲಿದೆ. ನನ್ನ ತಾತ ತಾಂಡವಮೂರ್ತಿ ಮೈಸೂರಿನಲ್ಲಿ ನೆಲೆಸಿದ್ದರು. ಅವರು ರಂಗಭೂಮಿ ಕಲಾವಿದರಾಗಿದ್ದರು. ಅವರಿಗೆ ತಮ್ಮ ಮೊಮ್ಮಗಳು ನಟಿ ಆಗಬೇಕು ಎನ್ನುವ ಕನಸು. ಅವರಿಗೆ ನನ್ನನ್ನು ಟೀವಿಯಲ್ಲಿ ನೋಡಬೇಕು ಎನ್ನುವ ಅಪೇಕ್ಷೆ. ಆಗಾಗ ಅದನ್ನೇ ಹೇಳುತ್ತಿದ್ದರು. ಅದು ನನಗೆ ಆಸೆಯನ್ನು ಹುಟ್ಟಿಸಿತು. ಅದೃಷ್ಟಕ್ಕೆ 'ಜೀವನ ಚೈತ್ರ'ದಲ್ಲಿ ನನಗೆ ಅವಕಾಶವೂ ಸಿಕ್ಕಿತು. ಪ್ರಸಾರ ಆರಂಭವಾಗಿ ಒಂದೇ ತಿಂಗಳಿಗೆ ಅವರು ನಮ್ಮನ್ನು ಅಗಲಿದರು. ನನ್ನ ಅಭಿನಯವನ್ನು ನೋಡಿ ಅವರು ಖುಷಿಪಟ್ಟರು ಎನ್ನುವುದು ನನಗೆ ಅತ್ಯಂತ ತೃಪ್ತಿಯನ್ನು ಕೊಟ್ಟಿದೆ. ಅದಾದ ಮೇಲೆ 'ಇವಳೇ ವೀಣಾ ಪಾಣಿ'ಯಲ್ಲಿ ನಾಯಕಿ ಪಾತ್ರ ನಿರ್ವಹಿಸಿದೆ. ಅದರ ಬೆನ್ನಿಗೆ 'ಅರಮನೆ ಗಿಳಿ'ಗೆ ಅವಕಾಶ ಬಂತು. ನನ್ನ ಶೈಕ್ಷಣಿಕ ಅರ್ಹತೆಯಿಂದ ಆರಂಭಿಸಿದ ಫ್ಯಾಷನ್ ಡಿಸೈನಿಂಗ್ ವೃತ್ತಿಯನ್ನು ಅಷ್ಟಕ್ಕೇ ಬಿಟ್ಟು, ಪೂರ್ಣಾವಧಿ ನಟಿಯಾಗಿ ನನ್ನ ಹವ್ಯಾಸವನ್ನು ವೃದ್ಧಿಸಿಕೊಂಡಿದ್ದೇನೆ.

**◆ ಹಳೆಯ ಭೂಮಾಲೀಕರ ಯಜಮಾನಿಕೆ ಪ್ರಾಧಾನ್ಯ ಕತೆಯ ಬಗ್ಗೆ ನಿಮಗೆ ಏನೆನಿಸುತ್ತದೆ?**

ಅರಮನೆ ಗಿಳಿ ಸಾಂಪ್ರದಾಯಿಕ ಕತೆ. ಇದರಲ್ಲಿ ನನಗೆ ಅಕ್ಕ ಇದ್ದಾಳೆ. ಆಕೆಯ ಮದುವೆ ನಾಯಕನ ಜೊತೆ ನೆರವೇರಬೇಕಿರುತ್ತದೆ. ಆದರೆ ಅವಳಿಗೆ ಆ ಮದುವೆ ಇಷ್ಟ ಇರಲಿಲ್ಲ. ಆಕೆ ಪ್ರೀತಿಸಿದ ಹುಡುಗನ ಜೊತೆ ಓಡಿ ಹೋಗುತ್ತಾಳೆ. ನೆರವೇರಬೇಕಾದ ಮದುವೆ ಅರ್ಧಕ್ಕೆ ನಿಂತಿದೆ ಎನ್ನುವುದು ನಮ್ಮ ಕುಟುಂಬಕ್ಕೆ ಗೌರವದ ಪ್ರಶ್ನೆ. ಆಗ ವಧುವಿನ ಸ್ಥಾನವನ್ನು ನಾನು ಅಲಂಕರಿಸುತ್ತೇನೆ. ನಮ್ಮ ಅಕ್ಕನಿಂದ ಆಗಿರುವ ತಪ್ಪನ್ನು ನಾನೇ ಸರಿ ಮಾಡಬೇಕು ಎನ್ನುವ ದೃಷ್ಟಿ ನನ್ನದು. ಹಾಗಾಗಿ ನಾನು ಮದುವೆಗೆ ಕೊರಳು ಒಡ್ಡುತ್ತೇನೆ. ಬಡತನ– ಸಿರಿತನ ವಿಷಯಕ್ಕಿಂತ ಇದು ಮರ್ಯಾದೆಯ ಪ್ರಶ್ನೆಯಾಗಿ ಕಾಡುತ್ತದೆ. ಕತೆಯಲ್ಲಿ ಅದು ಸರಿ ಎಂದೆನಿಸುತ್ತದೆ.

**◆ ನಿಮ್ಮ ವೃತ್ತಿ ಬದುಕು ಹೇಗೆನಿಸುತ್ತಿದೆ?**

ನಟಿಯಾಗಿದ್ದು ನನಗೆ ವೈಯಕ್ತಿಕವಾಗಿ ಖುಷಿ ಇದೆ. ಅಂದುಕೊಂಡಂತೆ ಶೇ.80 ರಷ್ಟು ಯಶಸ್ವಿಯಾಗಿದ್ದೇನೆ ಎಂದು ಅನ್ನಿಸಿದೆ. ಇನ್ನು ಶೇ. 20ರಷ್ಟು ಬಾಕಿ ಉಳಿದಿದೆ ಅದನ್ನೂ ಸಂಪೂರ್ಣ ಮಾಡುತ್ತೇನೆ ಎನ್ನುವ ವಿಶ್ವಾಸ ನನಗಿದೆ. ಮುಂದೆ ಸಿನಿಮಾ ಮಾಡಬೇಕು ಎನ್ನುವ ಕನಸೂ ಇದೆ. ಮೀರಾ ಪಾತ್ರ ಹೇಗೆ ಇದೆಯೋ ಅಂತಹ ಪಾತ್ರ ಸಿಕ್ಕರೆ ತುಂಬ ಸಂತೋಷ. ನನಗೆ ಭಕ್ತಿ ಪ್ರಧಾನ ಪಾತ್ರವನ್ನು ನಿರ್ವಹಿಸುವುದು ಇಷ್ಟ. ನನ್ನ ಸ್ವಭಾವಕ್ಕೆ ಮೀರಾ ಪಾತ್ರ ಸಾಕಷ್ಟು ಹೊಂದುವಂತಿದೆ. ಆಕೆಯಷ್ಟು ಸಂಪೂರ್ಣ ಒಳ್ಳೆಯವಳು ಅಲ್ಲದಿರಬಹುದು. ಆದರೆ ನನ್ನ ಸ್ವಭಾವ ಮೀರಾಳಲ್ಲಿ ಕಾಣಿಸುತ್ತದೆ.

**◆ ನಿಮ್ಮ ಇತರ ಹವ್ಯಾಸಗಳು ಏನು?**

ಆರೋಗ್ಯ ಮತ್ತು ಫಿಟ್ನೆಸ್ ಕಾಪಾಡಿಕೊಳ್ಳಬೇಕು. ಅದು ಮೊದಲ ಸವಾಲು. ಅದಕ್ಕಾಗಿ ಆದಷ್ಟು ಚಟುವಟಿಕೆಯಿಂದ ಇರುತ್ತೇನೆ. ಮೂಲತಃ ನಾನೊಬ್ಬ ಡಾನ್ಸರ್. ಅದರ ಅಭ್ಯಾಸ ಇದ್ದೇ ಇರುತ್ತದೆ. ಜೊತೆಗೆ ಹಾಡುತ್ತೇನೆ. ಆದರೆ ಹಾಡನ್ನು ಅಭ್ಯಾಸ ಮಾಡಲು ಸಮಯವಿಲ್ಲ. ನಿತ್ಯವೂ ಜಾಗಿಂಗ್ ಮಾತ್ರ ತಪ್ಪಿಸುವುದಿಲ್ಲ. ಊಟೋಪಚಾರದ ವಿಷಯದಲ್ಲಿ ಮಿತ ಆಹಾರ ಹಣ್ಣು ಹಂಪಲು ತಪ್ಪದೇ ಸೇವಿಸುತ್ತೇನೆ. ಓದುವುದು ನನ್ನ ಪ್ರೀತಿಯ ಕೆಲಸ. ಒಂದು ದಿನವೂ ಓದದೆ ಕಾಲ ಕಳೆದ ನಿದರ್ಶನವೇ ಇಲ್ಲ.

■ ರಾಘವೇಂದ್ರ